## ಪಿ ಡಬ್ಲೂ 1 ರವರನ್ನು ವಿ ಸಿ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 30-01-2026 ಮುಂದುವರಿದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

10. 90 ಗ್ರಾಂ ಬಂಗಾರದ ಲಕ್ಷಿ ಹಾರ ಜೊತೆ ಹರಳುಗಳು, 46 ಗ್ರಾಂ ಬಂಗಾರದ ನಾನ ಪೆಂಡೆಂಟ ಜೊತೆ ಹರಳುಗಳು, 50 ಗ್ರಾಂ ಮಂಗಳ ಸೂತ್ರ ಚೈನ ಜೊತೆ ಕರಿಮಣಿ, 5 ಗ್ರಾಂ ಬೊರಮಳ, 5 ಗ್ರಾಂ ಜಿರಾಮಣಿ, 5 ಗ್ರಾಮ ಚಪ್ಪಟಿಕೆ, 0.7500 ಗ್ರಾಂ ಬಟನ ಟಾಪ್ಸ, 50.900 ಗ್ರಾಂ ಬಿಸ್ಕಿಟ ಬಂಗಾರ, 6.500 ಗ್ರಾಂ ಜೊಳದ ಟಾಪ ಉಂಗುರ, 1.500 ಗ್ರಾಂ ಒಂದು ಜೊತೆ ತಾಳಿ ಮತ್ತು ಉಂಗುರ, 11.500 ಗ್ರಾಂ ನೆಕಲೆಸ, 4 ಗ್ರಾಂ ರಿಂಗ, 5.700 ಗ್ರಾಂ ಟಾಪ ಕಿವಿ ಬೆಂಡೊಲೆ, 4.900 ಗ್ರಾಂ 3 ಜೊತೆ ಗೊಂಡ್ಲ ಟಾಪ್ಸ, 10 ಗ್ರಾಂ ಉಂಗುರ, 50100 ಗ್ರಾಂ ಮಾರ್ಟಿನ ಹಾರ್ಟ ಪೆಂಡೆಂಟ, 7.100 ಗ್ರಾಂ ಸ್ಟೊನ ಫಿಂಗರ ರಿಂಗ ಎರಡು, 0.500 ಗ್ರಾಂ ಮಕ್ಕಳು ಉಂಗುರ, 507 ಗ್ರಾಂ ಒಂದು ಬೆಳ್ಳಿ ಪ್ಲೆಟ, 600 ಗ್ರಾಂ ಒಂದು ಬೆಳ್ಳಿ ಪ್ಲೆಟ, 235 ಗ್ರಾಂ ಒಂದು ಬೆಳ್ಳಿ ತಂಬಿಗೆ, 297 ಗ್ರಾಂ ಒಂದು ಬೆಳ್ಳಿ ತಂಬಿಗೆ, 348 ಗ್ರಾಂ ಒಂದು ಆರತಿ ಸೆಟ್, 145 ಗ್ರಾಂ ಬೆಳ್ಳಿ ಬಟ್ಟಲು ಎರಡು, 102 ಗ್ರಾಂ ಗಣೆಶ ಮಾರ್ತಿಗಳು ಎರಡು, 179 ಗ್ರಾಂ 8 ಬೆಳ್ಳಿ ಬಟ್ಟಲು, 247 ಗ್ರಾಂ ಆರತಿ ಸೆಟ್, 73 ಗ್ರಾಂ ಬೆಳ್ಳಿ ಗ್ಲಾಸ, 67 ಗ್ರಾಂ ಪೌಲಟ ಮತ್ತು ಚೈನ, 24 ಗ್ರಾಂ ಸಮಯ, 5 ಗ್ರಾಂ ಬಂಗಾರದ ಒಂದು ಸುತ್ತುಂಗುರ, 24.6 ಗ್ರಾಂ ಒಂದು ಬಂಗಾರದ ಗೊಬ ಲಾಕೆಟಗಳು 32 ಭಾವಚಿತ್ರಗಳಲ್ಲಿ ಇದ್ದು ಅವುಗಳನ್ನು ಆರೊಪಿತರು ನ್ಯಾಯಾಲಯದ ಆದೇಶದ ಮೆರೆಗೆ ಮಧ್ಯಂತರ ಅವಧಿಗೆ ಹಿಂಪಡೆಯುವ ಸಮಯದಲ್ಲಿ ತೆಗೆಯಲಾಗಿದ್ದು ಅವುಗಳನ್ನು ನೊಡಿ ಸಾಕ್ಷಿ ಗುರುತಿಸಿದ್ದು ಪ್ರತಿ ರಕ್ಷಣಾ ವಕೀಲರು ತಕರಾರು ಇಲ್ಲವೆಂದು ನುಡಿದಿದ್ದು ಕ್ರಮವಾಗಿ ನಿಪಿ 8 ರಿಂದ 39 ಎಂದು ಗುರುತಿಸಲಾಯಿತು.

11. ಈ ಪ್ರಕರಣದಲ್ಲಿ ತನಿಖೇಯ ಸಮಯದಲ್ಲಿ ಜಪ್ತಿ ಪಡಿಸಿಕೊಳಳಲಾದ 6 ಕ್ರಯ ಪತ್ರ, 2 ಶೇರು ದೃಡಿಕರಳಗಳು ಮತ್ತು 6 ಎಲ್ ಐ ಸಿ ಬಾಂಡ ಅವುಗಳನ್ನು ಆರೊಪಿತರು ನ್ಯಾಯಾಲಯದ ಆದೇಶದ ಮೆರೆಗೆ ಮಧ್ಯಂತರ ಅವಧಿಗೆ ಹಿಂಪಡೆದಿದ್ದು ಅವುಗಳ ದೃಡಿಕೃತ ನಕಲುಗಳನುನ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅವುಗಳನ್ನು ನೊಡಿ ಸಾಕ್ಷಿ ಗುರುತಿಸಿದ್ದು ಪ್ರತಿ ರಕ್ಷಣಾ ವಕೀಲರು ತಕರಾರು ಇಲ್ಲ ವೆಂದು ನುಡಿದಿದ್ದು ಕ್ರಮವಾಗಿ ನಿಪಿ 40 ರಿಂದ 53 ಎಂದು ಗುರುತಿಸಲಾಯಿತು.

12. ಈ ಪ್ರಕರಣದ ತನಿಖೆಯ ಸಮಯದಲ್ಲಿ ಜಪ್ತಿ ಪಡೆದ ಎ ಟಿ ಎಮ್ ಮತ್ತು ನಗದು ಹಣ ರೂ 50490/–ನ್ನು ಆರೊಪಿತರಿಗೆ ಹಿಂತಿರುಗಿಸಿ ಅವರ ಬ್ಯಾಂಕ ಖಾತೆಗೆ ವರ್ಗಾವಣೆ ಯಾಗಿದ್ದು, ಪ್ರತಿ ರಕ್ಷಣಾ ವಕೀಲರು ತಕರಾರು ಇಲ್ಲವೆಂದು ನುಡಿಯುತ್ತಾರೆ. ಈ ಪ್ರಕರಣದ ಆರೊಪಿತರು ನ್ಯಾಯಾಲಯದ ಮುಂದೆ ಹಾಜರಿರುತ್ತಾರೆಂದು ನೊಡಿ ಗುರುತಿಸುತ್ತಾರೆ, ಈ ಪ್ರಕರಣದ ನಿಪಿ 6 ಮತ್ತು 7 ಪಂಚನಾಮೆಗಳಿಗೆ ಆರೊಪಿಯು ಸಹಿ ಮಾಡಿರುತ್ತಾರೆ.

## ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎ ಎ ಯ್ಯು ವಕೀಲರಿಂದ

13. ಈ ಪ್ರಕರಣದಲ್ಲಿ ದೂರು ದಾಖಲಾದ ನಂತರ ನಾನು ತನಿಖೆ ಮುಂದುವರಿಸಲು ನನಗೆ ನಮ್ಮ ಲೊಕಾಯುಕ್ತ ಅಧಿಕ್ಷಕರು ಯಾವುದೇ ಆದೇಶ ನೀಡಿಲ್ಲ. ಈ ಪ್ರಕರಣದ ನಿಪಿ 6 ಮತ್ತು 7 ಗಳಲ್ಲಿ ನಮೂದಿಸಿರುವ ಎಲ್ಲಾ ಪಿಠೊಪಕರಣ ಮತ್ತು ವಸ್ತುಗಳ ಮೌಲ್ಯಗಳನ್ನು ಅಂದಾಜಿನ ಮಲೆ ಮೌಲ್ಯ ಮಾಪನ ಮಾಡಿಲಾಗಿದೆ ಎಂದರ ಸರಿ. ನಾನು ಪಂಚನಾಮೆಯಲ್ಲಿನ ಚಿನ್ನ ಮತ್ತು ಬೆಳ್ಳಿ ವಸ್ತು ಗಳ ಮೌಲ್ಯಮಾಪನ ವನ್ನು ದಾಳಿ ನಡೆಸಿದ ಮಾರುಕಟ್ಟೆ ಮೌಲ್ಯ ಆಧರಿಸಿ ಮಡಲಾಗಿದೆ ಎಂದೆರ ಸರಿ. ನಾನು ಯಾವುದೆ ಆಧಾರಗಳಿಲ್ಲದೆ ಈ ಪ್ರಕರಣದಲ್ಲಿ ಆರೊಪಿತ ವಿರುದ್ಧ ಸೊರ್ಸ

ವರದಿಯನ್ನು ನಿಪಿ 1 ರಂತೆ ತಯಾರಿಸಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.